ಒಎಸ್ ಸಂ.ಃ 21/2018
ಪಿಡಬ್ಲ್ಯೂ ಃ 1 (ಶ್ರೀನಿವಾಸರೆಡ್ಡಿ)
ದಿನಾಂಕ 21-11-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಶ್ರೀ ಎ.ಎಲ್.ಎನ್ ವಕೀಲರಿಂದ

ದಾವಾ ಆಸ್ತಿಯು ನಮಗೆ ದರಕಾಸ್ತು ಮುಖಾಂತರ ಮಂಜೂರಾಗಿರುತ್ತದೆ. ದಾವಾ ಆಸ್ತಿಯನ್ನು ನನಗೆ ಮಂಜೂರು ಮಾಡಬೇಕೆಂದು ದರಕಾಸ್ತು ಕಮಿಟಿಗೆ ಅರ್ಜಿ ಕೊಟ್ಟಿರುತ್ತೇನೆ. ಆ ಅರ್ಜಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನೇ ನನಗೆ ಮಂಜೂರು ಮಾಡಬೇಕೆಂದು ಕೇಳಿರುತ್ತೇನೆ. ಸರ್ವೆ ನಂ.44 ನ್ನು ನನಗೆ ಮಂಜೂರು ಮಾಡಬೇಕೆಂದು ನಾನು ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು 2 ಎಕರೆಗೆ ಅರ್ಜಿ ಕೊಟ್ಟಿದ್ದು ಅಳತೆ ಮಾಡಿದಾಗ ಸ್ವಾಧೀನದಲ್ಲಿ ನಾನು ಇದ್ದೇನೆ ಎಂದು ಪರಿಶೀಲಿಸಿ 3 ಎಕರೆ 18 ಗುಂಟೆಗೆ ಮಂಜೂರು ಮಾಡಿರುತ್ತಾರೆ. ಸರ್ವೆಯರ್ ಬಂದು ಅಳತೆ ಮಾಡಿ ಸ್ಕೆಚ್ ಕೊಟ್ಟಿರುತ್ತಾರೆ. ಸರ್ವೆಯರ್ ಬಂದಾಗ ಆಜೂಬಾಜುದಾರರಿಗೆ ನೋಟೀಸು ಕೊಟ್ಟಿರುವುದಿಲ್ಲ ಸಾಕ್ಷಿ ಮುಂದುವರೆದು ನೋಟೀಸು ಕೊಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ನನಗೆ ಅಕ್ಕಪಕ್ಕದವರಿಗೆ ನೋಟೀಸು ಕೊಡವುದು ಬೇಡ ಎಂದು ಅವರೇ ಹೇಳಿದ್ದರು ಏಕೆಂದರೆ ಹದ್ದುಬಸ್ತು ನಿಗದಿ ಪಡಿಸಬೇಕಾದಲ್ಲಿ ಮಾತ್ರ ನೋಟೀಸು ಕೊಡಬೇಕು ಸ್ವಾಧೀನವನ್ನು ಪರಿಶೀಲಿಸುವ ನೋಟೀಸು ಕೊಡುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುತ್ತಾರೆ ಎಂದು ಹೇಳುತ್ತಾರೆ.

1991-92 ರಲ್ಲಿ ಅರ್ಜಿ ಕೊಟ್ಟಿರುತ್ತೇನೆ. ನಾನು ಅರ್ಜಿ ಕೊಡುವ ಸಮಯದಲ್ಲಿ ಪಹಣಿಯಲ್ಲಿ ಕಾಲಂ ನಂ.9 ರಲ್ಲಿ ಸರ್ಕಾರ ಎಂದು ಇತ್ತು. ನಾನು ಅರ್ಜಿಯೊಂದಿಗೆ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಕೊಟ್ಟಿರುವುದಿಲ್ಲ. ಮಂಜೂರಾದ ನಂತರ ಕೂಡ ದಾವಾ ಆಸ್ತಿಯ ಪಹಣಿ ಪತ್ರಿಕೆ ಯಾರ ಹೆಸರಿನಲ್ಲಿದೆ ಎಂದು ನಾನು ನೋಡಿರುವುದಿಲ್ಲ. ದರಕಾಸ್ತು ಕಮಿಟಿಗೆ ಅರ್ಜಿ ಕೊಡಬೇಕಾದಲ್ಲಿ ಆ ಆಸ್ತಿಯು ಸರ್ಕಾರದ ಜಮೀನಾಗಿರಬೇಕು ಎಂದರೆ ಸರಿ. ಬೇರೆಯವರ ಹೆಸರಿನಲ್ಲಿ ಜಮೀನು ಇದ್ದಲ್ಲಿ ಅಂತಹ ಆಸ್ತಿಗೆ ಅರ್ಜಿ ಕೊಡಲು ಆಗುವುದಿಲ್ಲ ಎಂದರೆ ಸರಿ. ನಾನು 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಒಎಸ್ ನಂ.783/1995

ಎಂದು ಕೇಸು ಹಾಕಿದ್ದೇನೆ ಎಂದರೆ ಸರಿ.  ಆ ದಾವೆಯಲ್ಲಿ ನಾನು ದಾಖಲೆಗಳನ್ನು ಕೊಟ್ಟಿರುತ್ತೇನೆ ಪ್ರತಿವಾದಿಯು ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ.

ಈಗ ತೋರಿಸಿದ ದಾಖಲೆಯು ಸರ್ವೆ ನಂ.44 ರ ಪಹಣಿ ಪತ್ರಿಕೆಯ (ನ್ಯಾಯಾಲಯದಿಂದ ಪಡೆದ) ದೃಡೀಕೃತ ನಕಲಾಗಿರುತ್ತದೆ. ಅದನ್ನು ಪ್ರತಿವಾದಿ ಪರ ವಕೀಲರು ನಿಶಾನೆಗೊಳಿಸಲು ಕೋರಿದ್ದು ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ನನಗೆ ಸರ್ವೆ ನಂ.44 ಮಂಜೂರಾಗಿರುತ್ತದೆ ನನಗೆ 3 ಎಕರೆ 18 ಗುಂಟೆ ಆಸ್ತಿಯು ನಿ ಡಿ 1 ರಲ್ಲಿರುವ ಆಸ್ತಿಯನ್ನು ಸೇರಿಸಿ ಮಂಜೂರಾಗಿರುತ್ತದೆ. ಸಾಕ್ಷಿ ಮುಂದುವರೆದು ನನಗೆ ಮಂಜೂರಾಗುವಾಗ ಅವರ ಹೆಸರಿನಲ್ಲಿದ್ದ ಪಹಣಿಯನ್ನು ರದ್ದುಪಡಿಸಿ ಮೂಲ ಪಹಣಿಯಲ್ಲಿ ನನ್ನ ಹೆಸರನ್ನು ನಮೂದು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿ ಡಿ 1 ರ ಕಾಲಂ ನಂ.9ರಲ್ಲಿ ಜೋಡಿದಾರರು ಎಂದು ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ಇತ್ತು ಅದನ್ನು ತಹಶೀಲ್ದಾರ್‌ರವರು ರದ್ದುಪಡಿಸಿರುತ್ತಾರೆ ಎಂದು ಹೇಳುತ್ತಾರೆ.  ರದ್ದುಪಡಿಸುವ ಮೊದಲು ಜೋಡಿದಾರರಿಗೆ ನೋಟೀಸು ಜಾರಿ ಮಾಡಿರುತ್ತಾರೆ.

ತಹಶೀಲ್ದಾರ್‌ರವರು ಜೋಡಿದಾರರಿಗೆ ಯಾವುದೇ ನೋಟೀಸು ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸರ್ವೆ ನಂ.44 ಕ್ಕೆ ಯಾವುದೇ ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ಅರ್ಜಿಯಲ್ಲಿ 44 ಎಂದು ಹೇಳಿದ್ದು ಬರೆಯುವಾಗ ತಪ್ಪಾಗಿ 45 ಎಂದು ಆಗಿರುತ್ತದೆ ಎಂದು ಹೇಳುತ್ತಾರೆ.  ಒಎಸ್783/1995 ಕೇಸಿಗೆ ಬಂದಾಗ ತಪ್ಪಾಗಿರುವುದು ಗೊತ್ತಾಗಿರುತ್ತದೆ. ಆ ಅರ್ಜಿಯಲ್ಲಿ ತಪ್ಪಾಗಿ ನಮೂದಾಗಿರುವ ನಂಬರ್‌ನ್ನು ತಿದ್ದುಪಡಿ ಮಾಡಲು ಹೇಳಿರುತ್ತೇನೆ. ಆದರೆ ತಿದ್ದುಪಡಿ ಮಾಡಿಕೊಂಡಿರುವುದಿಲ್ಲ. ನನಗೆ ಅದನ್ನು ತಿದ್ದುಪಡಿ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಈಗ ತೋರಿಸಿದ ದಾಖಲೆಯು ನಾನು ನೀಡಿದ ಅರ್ಜಿಯ ನಕಲಾಗಿರುತ್ತದೆ ಎಂದರೆ ಸರಿ. ಅದನ್ನು ಪ್ರತಿವಾದಿ ಪರ ವಕೀಲರು ನಿಶಾನೆಗೊಳಿಸಲು ಕೋರಿದ್ದು ಅದನ್ನು ನಿ ಡಿ 2 ಎಂದು ಗುರುತಿಸಲಾಯಿತು. ಅರ್ಜಿ ಹಾಕುವ ಕಾಲಕ್ಕೆ ನನಗೆ 2 ಎಕರೆ ಆಸ್ತಿ ಇತ್ತು.  ನಿ ಡಿ 2 ರಲ್ಲಿ ಎಷ್ಟು ಆಸ್ತಿ ಇತ್ತು ಎಂದು ನಮೂದು ಮಾಡಿರುವುದಿಲ್ಲ. ಅರ್ಜಿ ಹಾಕುವ ಮೊದಲು 10 ವರ್ಷಗಳಿಂದ ಸ್ವಾಧೀನದಲ್ಲಿದ್ದೆವು. ಆ ಸಮಯದಲ್ಲಿ ಆಸ್ತಿಯ ಚೆಕ್ಕುಬಂಧಿ ಆಜೂಬಾಜು ಯಾರು ಇದ್ದರು ಎಂದು ನನಗೆ ಗೊತ್ತಿತ್ತು.

ನಾನು ಜೆ.ಕುರುಬರಹಳ್ಳಿಯ ಸರ್ವೆ ನಂ.45 ಕ್ಕೆ ಅರ್ಜಿ ಹಾಕಿರುವುದು ಎಂದರೆ ಸರಿಯಲ್ಲ. ಸರ್ವೆ ನಂ.45 ಈಗಲೂ ಕೂಡ ಕರಾಬು ಎಂದು ಬರುತ್ತಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈಗ ತೋರಿಸಿದ ಪಹಣಿ ಪತ್ರಿಕೆ ಸರ್ವೆ ನಂ.45ರಲ್ಲಿ ಕರಾಬು ಎಂದು ಇದೆ ಎಂದರೆ ಸರಿ. ಅದನ್ನು ಪ್ರತಿವಾದಿ ಪರ ವಕೀಲರು ನಿಶಾನೆಗೊಳಿಸಲು ಕೋರಿದ್ದು ಅದನ್ನು ನಿ ಡಿ 3 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಗೇಣಿಯಲ್ಲಿ ಲಕ್ಷ್ಮಕ್ಕ, ಪುಂಗನೂರು ಹುಸೇನ್ ಸಾಬಿ, ಹುಳ್ಳಿಂಗ ಹೈದರಸಾಬಿ ಇವರಿಗೆ ಮಂಜೂರಾಗಿ ಅವರ ಹೆಸರಿಗೆ ಪಹಣಿ ಕೂಡ ಬಂದಿರುತ್ತದೆ ಎಂದು ಹೇಳುತ್ತಾರೆ. ಅವರು ಯಾರ ವಿರುದ್ದ ಗೇಣಿ ಅರ್ಜಿ ಹಾಕಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.45 ಸರ್ವೆ ನಂ.44 ರ ಬಾಜೂ ಜಮೀನಾಗಿರುತ್ತದೆ. ಹಿಂದಿನಿಂದಲೂ ಸರ್ವೆ ನಂ.45 ರಲ್ಲಿ ಲಕ್ಷ್ಮಕ್ಕ, ಪುಂಗನೂರು ಹುಸೇನ್ ಸಾಬಿ, ಹುಳ್ಳಿಂಗ ಹೈದರಸಾಬಿಯವರೇ ಸ್ವಾಧೀನದಲ್ಲಿದ್ದರು. ಅವರಿಗೆ ಯಾವಾಗ ಆದೇಶ ಆಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ಅವರ ಹೆಸರಿಗೆ ಪಹಣಿ ಬಂದಿರುತ್ತದೆ. ಆ ಆಸ್ತಿಯ ಮಂಜೂರಾತಿಗಾಗಿ ನಾನು ಅರ್ಜಿ ಸಲ್ಲಿಸಿದ್ದು ಎಂದರೆ ಸರಿಯಲ್ಲ. ಸರ್ವೆ ನಂ.44 ರಲ್ಲಿ ಕಾಲಂ ನಂ.9 ರಲ್ಲಿ ಎಲ್ಲಾ ಜೋಡಿದಾರರ ಹೆಸರನ್ನು ಕಡಿತಗೊಳಿಸಿ ನನ್ನ ಹೆಸರು ಬರೆದಿದ್ದಾರೆ ಎಂದರೆ ಸರಿ.

ಈ ಆಸ್ತಿಯನ್ನು ನಾನು ಸಂಬಂಧಿಸಿದ ಪ್ರಾಧೀಕಾರದವರೊಂದಿಗೆ ಸೇರಿಕೊಂಡು ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.44 ರಲ್ಲಿ 1 ಎಕರೆ 14 ಗುಂಟೆ ಜೋಡಿದಾರರು ಎಂದು ಹೆಸರು ನಮೂದಾಗಿದೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಆದ ಖಾತವನ್ನು ರದ್ದುಪಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜೋಡಿದಾರರ ಹೆಸರನ್ನು ರದ್ದುಪಡಿಸಿ ನನ್ನ ಹೆಸರು ನಮೂದು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂ.44 ರಲ್ಲಿ ನಾನು ಜೋಡಿದಾರರ ಹೆಸರಿಗೆ ಇದ್ದಂತಹ ವಿಸ್ತೀರ್ಣವನ್ನು ರದ್ದುಪಡಿಸಿ ನನ್ನ ಹೆಸರಿಗೆ ಹೆಚ್ಚಿಗೆ ನಮೂದು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿ ಕೊಟ್ಟ ಸಮಯದಲ್ಲಿ ಜೋಡಿದಾರರು ತಕರಾರು ಮಾಡಿರುವುದಿಲ್ಲ. ನನಗೆ ಮಂಜೂರಾತಿ ಆದೇಶ 1994-95 ರಲ್ಲಿ ಆಗಿರುತ್ತದೆ. ನನಗೆ ಮಂಜೂರಾಗುವ ಸಮಯದಲ್ಲಿ ಕಮಿಟಿಯಲ್ಲಿ ಎಂ.ವೆಂಕಟಪ್ಪ ಇದ್ದರು ಅವರು ಎಂ.ಎಲ್.ಎ ಆಗಿದ್ದರು. ಸದಸ್ಯರಾಗಿ ವಿ.ನಾರಾಯಣ ಮತ್ತು ಸೋಮಣ್ಣ ಇದ್ದರು. ವಿ.ನಾರಾಯಣ ಎನ್ನುವವರು ನಮ್ಮ ಊರಿನವರು. ಪ್ರತಿವಾದಿ ಮತ್ತು ಪಿಡ್ಬ್ಯೂ 2 ರವರಿಗೂ ಹಿಂದಿನಿಂದಲೂ ಸಾಮರಸ್ಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಚೆನ್ನಾಗಿದ್ದರು ಎಂದು ಹೇಳುತ್ತಾರೆ.

ಪಿಡಬ್ಲ್ಯೂ 2 ಮತ್ತು ಪ್ರತಿವಾದಿಗೆ ವೈಮನಸ್ಸು ಇದ್ದಿದ್ದರಿಂದ ನಾವು ಶಾಮೀಲಾಗಿ ಸರ್ವೆ ನಂ.44 ನ್ನು ನನ್ನ ಹೆಸರಿಗೆ ಮಂಜೂರು ಮಾಡಿಕೊಂಡೆವು ಎಂದರೆ ಸರಿಯಲ್ಲ. ಮಂಜೂರಾದ 3 ವರ್ಷಗಳ ನಂತರ ನನಗೆ ಖಾತೆಯಾಗಿರುತ್ತದೆ. ಖಾತೆ ಆಗಲು ಯಾಕೆ ತಡವಾಯಿತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೇಣಿ ಆಸ್ತಿಗಳು ಜೋಡಿದಾರರ ಹೆಸರಿನಲ್ಲಿ ಬರುತ್ತಿದ್ದು ಈ ಆಸ್ತಿಯಲ್ಲಿದ್ದ ಜೋಡಿದಾರರ ಹೆಸರನ್ನು ಕಡಿತ ಮಾಡಿ ನನ್ನ ಹೆಸರು ನಮೂದು ಮಾಡಲು ತಡವಾಗಿರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ನನ್ನ ಹೆಸರಿಗೆ ಖಾತೆ ಮಾಡಬಾರದು ಎಂದು ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರು ಅರ್ಜಿ ಕೊಟ್ಟ ನಂತರ ರಾಜಸ್ವ ನಿರೀಕ್ಷಕರು ಸ್ಥಳಕ್ಕೆ ಬಂದು ವರದಿ ಬರೆದುಕೊಂಡರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ನೋಟೀಸು ಕೊಟ್ಟಿರುವುದಿಲ್ಲ ಅದನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಆ ಆಸ್ತಿಯು ಕರಾಬು 15 ಗುಂಟೆ ಸೇರಿ 1 ಎಕರೆ 29 ಗುಂಟೆ ಮಾತ್ರ ಇರುವುದು ಎಂದರೆ ಸರಿಯಲ್ಲ.

ಸದರಿ ಜಮೀನು ಜೋಡಿದಾರರಾದ ರಾಮಚಂದ್ರಯ್ಯ ಮತ್ತು ಅವರ ಕುಟುಂಬಕ್ಕೆ ಸೇರಿದ ಜಮೀನು ಎಂದರೆ ಸರಿಯಲ್ಲ. ಇದೇ ರೀತಿ ಊರಿನವರು ಹೇಳಿದಂತೆ ಮಹಜರ್ ಬರೆದಿರುವುದು ಎಂದರೆ ಸರಿಯಲ್ಲ. ಒಎಸ್ ನಂ.783/1995 ರಲ್ಲಿ ಇದ್ದಂತಹ ಚೆಕ್ಕುಬಂಧಿಯನ್ನು ಈ ದಾವೆಯಲ್ಲಿ ತೋರಿಸಿರುವುದು ಎಂದರೆ ಸರಿ. ಸರ್ವೆ ನಂ.44 1 ಎಕರೆ 29 ಗುಂಟೆ ಜಮೀನಿನ ಪೂರ್ವಕ್ಕೆ ಭಟ್ರಕುಪ್ಪ ಗಡಿ, ಪಶ್ಚಿಮಕ್ಕೆ ಸರ್ವೆ ನಂ.12/6 ಮೊದಲು ಲಕ್ಷ್ಮಮ್ಮನವರಿಗೆ ಸೇರಿದ್ದು ಸದರಿ ಜಮೀನನ್ನು ಪ್ರತಿವಾದಿಗೆ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಉತ್ತರಕ್ಕೆ ಸರ್ವೆ ನಂ.12/7 ಮತ್ತು ಸರ್ವೆ ನಂ.43 ಎಂದರೆ ಸಾಕ್ಷಿಯು 43 ಇದೆ 12/7 ಇರುವುದಿಲ್ಲ ಎಂದು ಹೇಳುತ್ತಾರೆ. ದಕ್ಷಿಣಕ್ಕೆ ಸರ್ವೆ ನಂ.19 ಮತ್ತು 89 ಇದೆ ಎಂದರೆ ಸರಿ. ಈ ಮೇಲೆ ಹೇಳಿದ ಚೆಕ್ಕುಬಂಧಿಯ ಮಧ್ಯೆ ದಾವಾ ಆಸ್ತಿ ಇದ್ದರೂ ಕೂಡ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಏಕೆಂದರೆ ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿಲ್ಲ ಆದ್ದರಿಂದ ನನಗೆ ಚೆಕ್ಕುಬಂಧಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಿನಾಂಕ 18.01.1991 ರಂದು ಜಿಲ್ಲಾಧಿಕಾರಿಯವರಿಗೆ ದಾವಾ ಆಸ್ತಿಯ ಖಾತೆ ಮಾಡಬೇಕೆಂದು ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿ. ಡಿ.ಸಿ ಯವರು ಪರಿಶೀಲಿಸಿ ಖಾತೆ ಮಾಡಬಹುದು ಎಂದು ಆದೇಶಿಸಿರುತ್ತಾರೆ. ದಿನಾಂಕ 22.12.1995 ರಲ್ಲಿ ರೆವಿನ್ಯೂ

ಇನ್ಸ್‌ಪೆಕ್ಟರ್‌ರವರು ನಾನು ಸ್ವಾಧೀನದಲ್ಲಿಲ್ಲ ರಾಮಚಂದ್ರಯ್ಯ ಸ್ವಾದೀನದಲ್ಲಿರುವುದು ಎಂದು ವರದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1991-92 ರಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿ ವೆಂಕಟೇಶಯ್ಯನವರು ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ಕೆ.ರಾಮಯ್ಯನವರು ಇನ್ಸ್‌ಪೆಕ್ಟರ್ ಆಗಿ ಬಂದರು ಎಂದರೆ ಸರಿ.

ನಾನು ಮಂಜೂರಾತಿಗಾಗಿ ಅರ್ಜಿ ಕೊಟ್ಟ ಸಮಯದಲ್ಲಿ ಕೆ.ರಾಮಯ್ಯರವರು ಬಂದು ಸರ್ವೆ ನಂ.44 ನ್ನು ಸ್ಥಳ ಪರಿಶೀಲನೆ ಮಾಡಿದರು ಎಂದರೆ ಸರಿ. ನಾನು ಅರ್ಜಿ ಕೊಟ್ಟಿದ್ದು ಸರ್ವೆ ನಂ.45 ಕ್ಕೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಂಬರ್ ತಪ್ಪಾಗಿರುತ್ತದೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಸಾಕ್ಷಿಯು ನನಗೆ ಸುಸ್ತಾಗಿದೆ ಸಾಕ್ಷ್ಯ ಹೇಳಲು ಬರುವುದಿಲ್ಲ ಎಂದು ಹೇಳಿದ್ದು ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೊಡಲು ಕೇಳಿದ್ದು ಮತ್ತು ವಾದಿ ಪರ ವಕೀಲರು ಕೂಡ ಕಾಲಾವಕಾಶ ಕೊಡಲು ಕೇಳಿದ್ದು ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.